ESI.A.No.48/2021

AW-1,

ದಿನಾಂಕಃ 14-03-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.

ಪಾಟೀ ಸವಾಲುಃ- ಎದುರುದಾರರ ಪರವಾಗಿಃ ಶ್ರೀ. SWK ವಕೀಲರಿಂದ

ನಮ್ಮ ಶಾಲೆಯು ಸೊಸೈಟಿ ಅಧೀನದಲ್ಲಿ ನಡೆಯುವ ಶಾಲೆಯಾಗಿರುತ್ತದೆ. ಈ ಕೇಸಿಗೆ ಹಾಜರಾಗುವ ವಿಚಾರದಲ್ಲಿ ನಮ್ಮ ಸೊಸೈಟಿಯು ಮಾಡಿರುವ ಠರಾವು ಇರುತ್ತದೆ ಆದರೆ ಅದನ್ನು ನ್ಯಾಯಾಲಯಕ್ಕೆ ಹಾಜರು ಮಾಡಿಲ್ಲ. ನನಗೆ ಈ ಕೇಸನಲ್ಲಿ ಸಾಕ್ಷ್ಯ ನುಡಿಯಲು ಅಧಿಕಾರ ಇದೆ ಎಂದು ನಾನು ಯಾವುದೇ ದಾಖಲೆಯನ್ನು ಕೊಟ್ಟಿಲ್ಲ ಎಂಬುದು ನಿಜ. 1992 ರಿಂದ ನಮ್ಮ ಶಾಲೆ ನಡೆಯು ತ್ತಿದೆ. ಆವತ್ತಿನಿಂದಲೂ ನಮ್ಮ ಸಂಸ್ಥೆಯಲ್ಲಿ 25 ಕ್ಕಿಂತ ಜಾಸ್ತಿ ಕಾರ್ಮಿಕರು ಇದ್ದಾರೆ ಎಂದರೆ ಸಾಕ್ಷಿಯು ಆರಂಭದಲ್ಲಿ ಇರಲಿಲ್ಲ ಎನ್ನುತ್ತಾರೆ. ಇ ಎಸ್ ಐ ಕೋಡನ್ನು ನಮ್ಮ ಸಂಸ್ಥೆಯವರೇ ಪಡೆದಿದ್ದಾರೆ ಎಂದರೆ ನಿಜ. ಕೋಡ್ ನಂಬರ್ ಪಡೆಯುವ ಸಮಯದಲ್ಲಿ ನಮ್ಮ ಸಂಸ್ಥೆಯಲ್ಲಿ 20 ಜನ ಕಾರ್ಮಿಕರು ಇದ್ದರು. ದಿನಾಂಕಃ1-9-2016 ರಿಂದ 28-2-2021 ರವರೆಗೆ ಇ ಎಸ್ ಐ ವಂತಿಗೆಯನ್ನು ಪಾವತಿ ಮಾಡಿಲ್ಲ ಎಂದು ನೋಟೀಸ್ ಬಂದಿತ್ತು ಎಂದರೆ ಸಾಕ್ಷಿ ಅದು ಕೋವಿಡ್ ಅವಧಿಯಾಗಿದ್ದರಿಂದ ನಮಗೆ ಅದು ಸಿಕ್ಕಿಲ್ಲ ಎಂದು ನುಡಿಯುತ್ತಾರೆ. ಆ ನೋಟೀಸಿನಲ್ಲಿ ರೂ.8,47,688-00 ಗಳನ್ನು ಕಟ್ಟಬೇಕೆಂದು ತಿಳಿಸಲಾಗಿತ್ತು ಎಂದರೆ ಜ್ಞಾಪಕವಿಲ್ಲ. ಆ ನೋಟೀಸಿನಲ್ಲಿ ದಿಃ12-5-2021 ರಂದು ಖುದ್ದು ಸುನಾವಣೆಗೆ ಹಾಜರಾಗಬೇಕೆಂದು ತಿಳಿಸಲಾಗಿತ್ತು ಎಂದರೆ ನನಗೆ ಜ್ಞಾಪಕವಿಲ್ಲ. ಆ ದಿನ ನಮ್ಮ ಶಾಲೆಯ ವತಿಯಿಂದ ಖುದ್ದು ಸುನಾವಣೆಗೆ ಯಾರೂ ಹಾಜರಾಗಿರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ದಿಃ18-6-2021 ರಂದು ಇನ್ನೊಂದು ಖುದ್ದು ಸುನಾವಣೆಗೆ ಹಾಜರಾಗಬೇಕೆಂದು ನನಗೆ ನೋಟೀಸ್ ಬಂತು ಎಂದರೆ ಜ್ಞಾಪಕವಿಲ್ಲ. ಆವತ್ತು ಹಾಜರಾಗಿಲ್ಲವೆಂದು ದಿನಾಂಕಃ13-7-2021 ರಂದು ಖುದ್ದು ಸುನಾವಣೆಗೆ ಹಾಜರಾಗುವಂತೆ ಮತ್ತೊಂದು ನೋಟೀಸನ್ನು ಕಳುಹಿಸಿದರು ಎಂದರೆ ಜ್ಞಾಪಕವಿಲ್ಲ. ನಮ್ಮ ಶಾಲೆಯಿಂದ ದಿಃ10-7-2021 ರಂದು ಒಂದು ಇ ಮೇಲ್ ಕಳುಹಿಸಿ ದಿಃ13-7-2021 ರಂದು ಖುದ್ದು ಸುನಾವಣೆಗೆ ಹಾಜರಾಗಲು ಆಗುವುದಿಲ್ಲ ಎಂದು ತಿಳಿಸಿದ್ದೇವೆ ಎಂದರೆ ಇರಬಹುದು ಆಗ ನನಗೆ ಅನಾರೋಗ್ಯವಿತ್ತು ಎಂದು ಸಾಕ್ಷಿ ನುಡಿಯುತ್ತಾರೆ. ಆನಂತರ 5-8-2021 ರಂದು ಇನ್ನೊಂದು ಖುದ್ದು ಸುನಾವಣೆಗೆ ನನ್ನ ಪರವಾಗಿ ಯಾರೂ ಹಾಜರಾಗಿರಲಿಲ್ಲ ಎಂದರೆ ನಿಜ. ನಾವು ದಾಖಲೆಗಳನ್ನು ಹಾಜರು ಮಾಡಿಲ್ಲ ಎಂಬ ಕಾರಣಕ್ಕೆ ರೂ.6,82,688-00 ಗಳನ್ನು ಕಟ್ಟಬೇಕೆಂದು ಕಲಂ 45 ಎ ರಡಿಯಲ್ಲಿ ಆದೇಶವನ್ನು ಹೊರಡಿಸಲಾಗಿತ್ತು ಎಂದರೆ ಇರಬಹುದು ನನಗೆ ಜ್ಞಾಪಕವಿಲ್ಲ ಎನ್ನುತ್ತಾರೆ. ಕಲಂ 45 ಎ ಆದೇಶವನ್ನು ಪ್ರಶ್ನಿಸಿ 45 ಎಎ ರನ್ವಯ ನಾವು ಮೇಲ್ಮನವಿ ಹೂಡಿಲ್ಲ ಎಂದರೆ ನಿಜ. ಆ ಸಮಯದಲ್ಲಿ ಬೇರೆಯವರನ್ನು ಖುದ್ದು ಸುನಾವಣೆಗೆ ಕಳುಹಿಸಲು ತೊಂದರೆ ಇತ್ತೇ ಎಂದರೆ ಸಾಕ್ಷಿ ನಾನು ಕಾರ್ಯದರ್ಶಿಯಾಗಿದ್ದೆ ಮತ್ತು

ESI.A.No.48/2021

AW-1,

ಬೇರೆಯವರು ಇದರಲ್ಲಿ ಇನ್ವಾಲ್ವ ಆಗಿರಲಿಲ್ಲ ಎಂದು ನುಡಿಯುತ್ತಾರೆ. 2019 ರಲ್ಲಿ ಸೋಶಿಯಲ್ ಸೆಕ್ಯೂರಿಟಿ ಆಫೀಸರವರು ನಮ್ಮ ಸಂಸ್ಥೆಗೆ ಭೇಟಿ ನೀಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಆ ಸಮಯದಲ್ಲಿ ನಮ್ಮ ಸಂಸ್ಥೆಯವರು ಸೆಪ್ಟಂಬರ್ 2019 ರ ವೇಜ್ ರಿಜಿಸ್ಟರನ್ನು ಹಾಜರು ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ. ನಾನು ನ್ಯಾಯಾಲಯದ ಮುಂದೆ ಹಾಜರುಪಡಿಸಿರುವ ಕಾರ್ಮಿಕರ ವೇತನವು ಮಿತಿಯೊಳಗೆ ಇರುತ್ತದೆ ಎಂದರೆ ನಿಜ. ಕಲಂ 45 ಎ ಆದೇಶವನ್ನು ಪಾಲಿಸಿಲ್ಲ ಎಂದು ದಿನಾಂಕಃ23-11-2021 ರಲ್ಲಿ ಸಿ-19 ನೋಟೀಸು ಬಂತು ಎಂದರೆ ನಿಜ. ಅದರಲ್ಲಿ ವಂತಿಗೆ ಮತ್ತು ಬಡ್ಡಿಯನ್ನು ಸೇರಿಸಿ ರೂ.9,17,579-00 ಗಳನ್ನು ಕಟ್ಟಬೇಕೆಂದು ತಿಳಿಸಿದ್ದಾರೆ ಎಂದರೆ ಜ್ಞಾಪಕವಿಲ್ಲ. ಇ ಎಸ್ ಐ ಕೋಡ್ ನಂಬರನ್ನು ಪಡೆದಾಗ ಸಮಯಕ್ಕೆ ಸರಿಯಾಗಿ ಇ ಎಸ್ ಐ ವಂತಿಗೆಯನ್ನು ಪಾವತಿಸಬೇಕೆಂದು ನಮಗೆ ಗೊತ್ತಿತ್ತು ಎಂದರೆ ನಿಜ. ಅದೇರೀತಿಯಲ್ಲಿ ಸಮಯಕ್ಕೆ ಸರಿಯಾಗಿ ವಂತಿಗೆಯನ್ನು ಪಾವತಿ ಮಾಡದಿದ್ದರೆ ಬಡ್ಡಿಯನ್ನು ಕಟ್ಟಬೇಕಾಗುತ್ತದೆ ಎಂಬ ವಿಚಾರವು ನನ್ನ ಗಮನದಲ್ಲಿತ್ತು. ಇ ಎಸ್ ಐ ವಂತಿಗೆ ಮತ್ತು ಬಡ್ಡಿಯನ್ನು ಕಟ್ಟುವುದನ್ನು ತಪ್ಪಿಸಿಕೊಳ್ಳುವ ಉದ್ದೇಶನಿಂದ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ನನ್ನ ಉಕ್ತ ಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಗಣಕೀಕರಿಸಲಾಯಿತು.)

(ಮೇಲಿನ ಸಾಕ್ಷ್ಯವನ್ನು ಸಾಕ್ಷಿಗೆ ಓದಿ , ತಿಳಿಸಿ , ಹೇಳಿದಾಗ ಅವರು ಸರಿ ಇದೆ ಎಂದು ಒಪ್ಪಿದ್ದಾರೆ).

(ರುಡೋಲ್ಫ್ ಪಿರೇರಾ),
ಅಧ್ಯಕ್ಷಾಧಿಕಾರಿಗಳು/ಜಡ್ಜ್
ಇ.ಎಸ್.ಐ.ನ್ಯಾಯಾಲಯ,
ಮೈಸೂರು.